ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ,

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560 010.
ಫೋನ್:080-2340 7011 to 25, ಫ್ಯಾಕ್ಸ್:91-2314 3566 / 2338 9070
ಇ-ಮೈಲ್:kssidcho@karnatakagov.in ವೆಬ್ ಸೈಟ್:www.kssidc.co.in

---

ಸಂಖ್ಯೆ: ಆಡಳಿತ/ಸಾಮಾನ್ಯ ಕಡತ/2024 ದಿನಾಂಕ : 18.10.2024

| ಪ್ರಧಾನ ವ್ಯವಸ್ಥಾಪಕರು (ಆಡಳಿತ & ಭೂಸ್ವಾಧೀನ) | ಅಂತರ ಕಛೇರಿ ಟಿಪ್ಪಣಿ | ವ್ಯವಸ್ಥಾಪಕರು(ಇಡಿಪಿ) |
|---|---|---|

ವಿಷಯ: ನಿಗಮದ ಕೇಂದ್ರ ಕಛೇರಿಯ ಹಳೆಯ ಪೀಠೋಪಕರಣ, ಇನ್ನಿತರೆ ಸಾಮಗ್ರಿ ಹಾಗೂ ವಾಹನದ ಬಿಡಿಭಾಗಗಳ ವಿಲೇವಾರಿಗಾಗಿ ಹೊರಡಿಸಿರುವ ಅಲ್ಪಾವಧಿ ಟೆಂಡರ್ ಅಧಿಸೂಚನೆಯನ್ನು ನಿಗಮದ ವೆಬ್‌ಸೈಟ್‌ನಲ್ಲಿ ಅಳವಡಿಸುವ ಕುರಿತು.

---

ವಿಷಯಕ್ಕೆ ಸಂಬಂಧಿಸಿದಂತೆ, ನಿಗಮದ ಕೇಂದ್ರ ಕಛೇರಿಯ ಹಳೆಯ ಪೀಠೋಪಕರಣ, ಇನ್ನಿತರೆ ಸಾಮಗ್ರಿ ಹಾಗೂ ವಾಹನದ ಬಿಡಿಭಾಗಗಳ ವಿಲೇವಾರಿಗಾಗಿ ದಿನಾಂಕ 18.10.2024 ರಂದು ಪತ್ರಿಕಾ ಪ್ರಕಟಣೆ ನೀಡಲಾಗಿದ್ದು, ಅದರಂತೆ ಅಲ್ಪಾವಧಿ ಟೆಂಡರ್ ಸೂಚನೆಯನ್ನು ಈ ಟಿಪ್ಪಣಿಗೆ ಲಗತ್ತಿಸಲಾಗಿದ್ದು, ಅದನ್ನು ಇಂದೇ ನಿಗಮದ ವೆಬ್‌ಸೈಟ್‌ನಲ್ಲಿ ಅಳವಡಿಸುವಂತೆ ತಿಳಿಸಲಾಗಿದೆ. ವಿಷಯವನ್ನು ಅತೀಜರೂರೆಂದು ಪರಿಗಣಿಸುವುದು.

ಅಡಕ: ಮೇಲಿನಂತೆ.

ಪ್ರಧಾನ ವ್ಯವಸ್ಥಾಪಕರು
(ಆಡಳಿತ & ಭೂಸ್ವಾಧೀನ)

ಕರಾಸಕೈಅನಿನಿ
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ,
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಣಿ ಸಂಖ್ಯೆ:ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560 010.
ಫೋನ್:080-2340 7011 to 25, ಫ್ಯಾಕ್ಸ್:91-2314 3566 / 2338 9070 ತಂತಿ: ಮೈಸ್ಮಾಲ್ ಕಾರ್ಪ್
ಇ-ಮೈಲ್:kssidcho@karnatakagov.in ವೆಬ್ ಸೈಟ್:www.kssidc.co.in

---

ಸಂಖ್ಯೆ:ಆಡಳಿತ/ಕೇಂದ್ರ ಕಛೇರಿ/ಪೀಠೋ/ವಿಲೇವಾರಿ/2024 ದಿನಾಂಕ 18.10.2024

## ಅಲ್ಪಾವಧಿ ಟೆಂಡರ್ ಅಧಿಸೂಚನೆ

ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಎಸ್‌ಐಡಿಸಿ, ಪ್ರಧಾನ ಕಛೇರಿ, ಬೆಂಗಳೂರು ಇಲ್ಲಿ ಸಂಗ್ರಹಿಸಿರುವ ಅನುಪಯುಕ್ತ ಹಳೆಯ ಪೀಠೋಪಕರಣಗಳನ್ನು ಹಾಗೂ ಇತರ ವಸ್ತುಗಳನ್ನು ಹೇಗಿದೆಯೋ ಹಾಗೇ ಸ್ಥಿತಿಯಲ್ಲಿ ವಿಲೇವಾರಿ ಮಾಡಲು ಉದ್ದೇಶಿಸಿದ್ದಾರೆ. ಈ ಆಧಾರದಲ್ಲಿ ಇರುವಂತೆಯೇ, ಆಸಕ್ತ ಸ್ಕ್ಯಾಪ್ ಮಾರಾಟಗಾರರು/ ವಿತರಕರು, ವ್ಯಕ್ತಿಗಳು ಕೆಳಗೆ ಸೂಚಿಸಿದಂತೆ ಮೊಹರು ಮಾಡಿರುವ ಲಕೋಟೆಯಲ್ಲಿ ದರಗಳನ್ನು ಸಲ್ಲಿಸಬಹುದಾಗಿದೆ.

<table>
<tr><th>ಕ್ರ.ಸಂ</th><th>ವಿವರಣೆ</th><th>ಇಎಂಡಿ<br>ರೂ. (ಮರುಪಾವತಿ)</th></tr>
<tr><td>01</td><td>ಕೆಎಸ್‌ಎಸ್‌ಐಡಿಸಿ, ಪ್ರಧಾನ ಕಛೇರಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010. ಆವರಣದಲ್ಲಿ ಸಂಗ್ರಹಿಸಲಾಗಿರುವ ಹಳೆಯ ಪೀಠೋಪಕರಣಗಳು ಹಾಗೂ ಇತರೆ ಸ್ಕ್ಯಾಪ್ ವಸ್ತುಗಳನ್ನು "ಹೇಗಿದೆಯೋ ಹಾಗೆ" ಆಧಾರದಲ್ಲಿ ಹರಾಜು ಮಾಡುವ ಬಗ್ಗೆ.</td><td>10,000/-</td></tr>
<tr><td>02</td><td>ನಿಗಮವು ಪ್ರಸ್ತಾಪಿಸಿರುವ ಮೇಲ್ಕಂಡ ಹಳೆಯ ಪೀಠೋಪಕರಣಗಳು ಹಾಗೂ ಇತರೆ ಸ್ಕ್ಯಾಪ್ ವಸ್ತುಗಳ ಮೂಲ ಮೌಲ್ಯವನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.
<table>
<tr><th>Sl. no</th><th>Particular</th><th>Value of Scrap per Kg. (Varies approximately)</th></tr>
<tr><td>1</td><td>Scrap value of the machineries</td><td>Rs.20 to Rs.30</td></tr>
<tr><td>2</td><td>Scrap value of MS</td><td>Rs.20 to Rs.25</td></tr>
<tr><td>3</td><td>Scrap value of Aluminum</td><td>Rs.30 to Rs.50</td></tr>
<tr><td>4</td><td>Scrap value of wood</td><td>Rs.05 to Rs.08</td></tr>
<tr><td>5</td><td>Scrap value of Tyre</td><td>Rs.20 to Rs.50</td></tr>
</table>
ನಿಗದಿಪಡಿಸಲಾದ ಮೌಲ್ಯಕ್ಕಿಂತ ಬಿಡ್ಡುದಾರರು ನಮೂದು ಮಾಡುವ ಮೌಲ್ಯವು ಕಡಿಮೆಯಿರಬಾರದು. ಒಂದು ವೇಳೆ ನಿಗಮವು ನಿಗಧಿಪಡಿಸುವಂತೆ ಮೂಲ ಬೆಲೆಗಿಂತ ಕಡಿಮೆ ಮೌಲ್ಯವು ನಮೂದು ಆದಲ್ಲಿ ಅಂತಹ ಬಿಡ್ಡುದಾರರು ಬಿಡ್ಡುಗಳನ್ನು ಪರಿಗಣಿಸುವುದಿಲ್ಲ.</td><td></td></tr>
</table>

..2.

ಕಾಲಾವಧಿ

ಮೊಹರು ಮಾಡಲಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾದ 28.10.2024 ರಂದು ಸಂಜೆ 5.00 ಗಂಟೆಯೊಳಗೆ (ಭರ್ತಿ ಮಾಡಿದ ಮೊಹರು ಮಾಡಲಾದ ಬೆಲೆ ನಮೂನೆ (ಕೊಟೇಷನ್) ಗಳನ್ನು ಪ್ರಧಾನ ವ್ಯವಸ್ಥಾಪಕರು (ಆಡಳಿತ & ಭೂಸ್ವಾಧೀನ) ರವರ ಕಛೇರಿ, ಕರಾಸಕೈಅನಿನಿ, ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560 010. ರವರ ಕಛೇರಿಯಲ್ಲಿ ಒದಗಿಸಿರುವ ಟೆಂಡರ್ ಬಾಕ್ಸ್‌ನಲ್ಲಿ ಹಾಕತಕ್ಕದ್ದು.

ಸೂಚನೆ:

1. ಆಸಕ್ತ ಬಿಡ್‌ದಾರರು ಪ್ರಧಾನ ಕಛೇರಿ ಆವರಣದಲ್ಲಿ ಶೇಖರಿಸಲಾಗಿರುವ ಹಳೆಯ ಪೀಠೋಪಕರಣಗಳು ಹಾಗೂ ಇತರೆ ಸ್ಕ್ರ್ಯಾಪ್ ಕಛೇರಿ ಆವರಣದಲ್ಲಿ ಬಂದು ಪರಿವೀಕ್ಷಿಸಬಹುದು. ನಿಗಮದ ಪ್ರಸ್ತಾಪಿಸುವ ಮೇಲ್ಕಂಡ ಹಳೆಯ ಪೀಠೋಪಕರಣಗಳು ಹಾಗೂ ಇತರೆ ಸ್ಕ್ರ್ಯಾಪ್ ವಸ್ತುಗಳ ಮೂಲ ಮೌಲ್ಯವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

| Sl.no | Particular | Value of Scrap per Kg. (Varies approximately) |
|---|---|---|
| 1 | Scrap value of the machineries | Rs.20 to Rs.30 |
| 2 | Scrap value of MS | Rs.20 to Rs.25 |
| 3 | Scrap value of Aluminum | Rs.30 to Rs.50 |
| 4 | Scrap value of wood | Rs.05 to Rs.08 |
| 5 | Scrap value of Tyre | Rs.20 to Rs.50 |

ನಿಗದಿಪಡಿಸಿದ ಮೌಲ್ಯಕ್ಕಿಂತ ಬಿಡ್ದುದಾರರು ನಮೂದು ಮಾಡುವ ಮೌಲ್ಯವು ಕಡಿಮೆಯಿರಬಾರದು. ಒಂದು ವೇಳೆ ನಿಗಮವು ನಿಗಧಿಪಡಿಸಿದ ಮೂಲ ಬೆಲೆಗಿಂತ ಕಡಿಮೆ ಮೌಲ್ಯವು ನಮೂದು ಆದಲ್ಲಿ ಅಂತಹ ಬಿಡ್ದುದಾರರು ಬಿಡ್ದುಗಳನ್ನು ಪರಿಗಣಿಸುವುದಿಲ್ಲ.

2. ಕೆಎಸ್‌ಎಸ್‌ಐಡಿಸಿ, ಬೆಂಗಳೂರು ಪರವಾಗಿ ಡಿಡಿ ಮೂಲಕ ಬಿಡ್ ಮೊತ್ತವನ್ನು ಪಾವತಿಸಿದ ನಂತರ ಸಕ್ಷಮ ಪ್ರಾಧಿಕಾರಿಯವರ ಅನುಮೋದನೆಯ ಮೇರೆಗೆ ಹರಾಜಾದ ಹಳೆಯ ಸಾಮಗ್ರಿಗಳನ್ನು ಎತ್ತಲು ಅತಿ ಹೆಚ್ಚಿನ ಬಿಡ್ ದರ ನಮೂದಿಸಿದವರನ್ನು ಪರಿಗಣಿಸಲಾಗುತ್ತದೆ.
3. ಟೆಂಡರ್‌ಗಳನ್ನು ಸಾಧ್ಯವಾದಷ್ಟು ಅದೇ ದಿನದಂದು ಟೆಂಡರ್ ಪ್ಯಾನೆಲ್ ಮೂಲಕ 5.30 ಕ್ಕೆ ಹಾಜರಿರಲು ಬಯಸುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುತ್ತದೆ.

4. ವಿಳಾಸ ಮತ್ತು ಗುರುತಿನ ಪುರಾವೆಯ ಪ್ರತಿ / ಸಂಸ್ಥೆಯ ಹೆಸರು ಇತ್ಯಾದಿ, ಜಿಎಸ್‌ಟಿ ಪ್ರಮಾಣ ಪತ್ರದ ಪ್ರತಿ, ಪ್ಯಾನ್ ಕಾರ್ಡ್/ ಆಧಾರ್ ಕಾರ್ಡ್ ಅನ್ನು ಟೆಂಡರ್ ಪಾರ್ಮ್‌ಗಳ ಕೋರಿಕೆಯ ಜೊತೆಗೆ ಲಗತ್ತಿಸಬೇಕು. ವಿಫಲವಾದರೆ ಟೆಂಡರ್ ಫಾರ್ಮ್‌ಗಳನ್ನು ನೀಡಲಾಗುವುದಿಲ್ಲ.
5. ವಸ್ತುಗಳನ್ನು ಎತ್ತುವ ಆದೇಶವನ್ನು ಎತ್ತಲು ಆದೇಶ ನೀಡಿದ ದಿನಾಂಕದಿಂದ 07 ದಿನಗಳಲ್ಲಿ ಎತ್ತಬೇಕು. ಕೆಎಸ್ಎಸ್ಐಡಿಸಿ ಆಸ್ತಿಗೆ ಯಾವುದೇ ಹಾನಿಯಾಗದಂತೆ ವಸ್ತುಗಳನ್ನು ತೆಗೆದುಕೊಳ್ಳಬೇಕು.
6. ಯಾವುದೇ ರೀತಿಯ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಮತ್ತು ಸಾಗಾಣಿಕೆ ವೆಚ್ಚವನ್ನು ಯಶಸ್ವಿ ಬಿಡ್ಡುದಾರರೇ ಭರಿಸಬೇಕು.
7. ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಎಸ್ಐಡಿಸಿ, ಬೆಂಗಳೂರು ಅವರು ಯಾವುದೇ ಕಾರಣಗಳನ್ನು ನೀಡದೆ ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದ್ದಾರೆ.
8. ಯಶಸ್ವಿ ಬಿಡ್ಡುದಾರರು ಹರಾಜುಗೊಂಡ ಸಾಮಗ್ರಿಗಳನ್ನು ತೂಕ ಮಾಡಿಸಿಕೊಂಡು ಅನ್ವಯವಾಗುವ ದರವನ್ನು ಪಾವತಿಸಿ ನಿಗಧಿತ ಅವಧಿಯೊಳಗೆ ತೆಗೆದುಕೊಳ್ಳದಿದ್ದಲ್ಲಿ ಪಾವತಿಸಿರುವ ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9. ಮೇಲಿನ ಕೆಲಸಗಳ ಟೆಂಡರ್‌ಗಳಿಗೆ ಸಂಬಂದಿಸಿದಂತೆ ಯಾವುದೇ ವಿವರಗಳು/ ಯಾವುದೇ ಮಾಹಿತಿಯನ್ನು ಪ್ರಧಾನ ವ್ಯವಸ್ಥಾಪಕರು (ಆಡಳಿತ & ಭೂಸ್ವಾಧೀನ), ಆಡಳಿತ ಕಛೇರಿ, ಕೆಎಸ್ಎಸ್ಐಡಿಸಿ, ರಾಜಾಜಿನಗರ, ಬೆಂಗಳೂರು-10 ರವರ ಕಛೇರಿಯಿಂದ ಎಲ್ಲಾ ಕೆಲಸದ ದಿನಗಳಲ್ಲಿ ಕಛೇರಿ ಸಮಯದಲ್ಲಿ ಅಥವಾ ವೆಬ್ ಸೈಟ್ www.kssidc.co.in ನಿಂದ ಪಡೆಯಬಹುದು.
10. ಷರತ್ತುಬದ್ಧ ಮತ್ತು ಅಪೂರ್ಣ ಟೆಂಡರ್‌ಗಳು ತಿರಸ್ಕರಿಸಲಾಗುವುದು

ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದನೆ ದಿನಾಂಕ 16.10.2024

ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಡಳಿತ)

ಪ್ರತಿ;

1. ಪ್ರಧಾನ ವ್ಯವಸ್ಥಾಪಕರು (ಆಡಳಿತ & ಭೂಸ್ವಾಧೀನ)/(ಹಣಕಾಸು), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
2. ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಸಮನ್ವಯ)/(ಆಂಲೆಪ), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಹಣಕಾಸು), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
5. ಸೂಚನಾ ಫಲಕ. 6] ಸಂಬಂಧಪಟ್ಟ ಕಡತ.